ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/06/ಇಸಿಎಸ್(1)/2023

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560001,
ದಿನಾಂಕ: 07-12-2023.

## ಸುತ್ತೋಲೆ

ವಿಷಯ: ಡಿಸೆಂಬರ್ 2023ರ ಡಿಪ್ಲೋಮಾ ಸೆಮಿಸ್ಟರ್ ಪ್ರಾಯೋಗಿಕ ಪರೀಕ್ಷೆಗಳ ಪ್ರಾರಂಭ ಮತ್ತು ಸಮರ್ಪಕವಾಗಿ ನಡೆಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/06/ಇಸಿಎಸ್(1)/2023, ದಿ: 05-12-2023.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಡಿಸೆಂಬರ್ 2023ರ ಪ್ರಾಯೋಗಿಕ ಪರೀಕ್ಷಕರ ಪಟ್ಟಿ ಎಲ್ಲಾ ಸಂಸ್ಥೆಗಳಿಗೂ ಬಿಟಿಇ ಲಿಂಕ್ಸ್ ವೆಬ್ ಪೋರ್ಟ್ ಲ್ ನಲ್ಲಿ ಲಭ್ಯವಿದ್ದು ಉಲ್ಲೇಖಿತ ಜ್ಞಾಪನದನ್ವಯ **ಡಿಸೆಂಬರ್ 2023ರ ಡಿಪ್ಲೋಮಾ ಸೆಮಿಸ್ಟರ್ ಪ್ರಾಯೋಗಿಕ ಪರೀಕ್ಷೆಗಳನ್ನು ದಿನಾಂಕ: 08-12-2023 ರಿಂದ ಪ್ರಾರಂಭಿಸಲು ಸೂಚಿಸಲಾಗಿದೆ.**

ಮುಂದುವರೆದು ಎಲ್ಲಾ ಪರೀಕ್ಷಕರ ಸಮಿತಿಗಳ ಅಧ್ಯಕ್ಷರುಗಳು ಸಂಸ್ಥೆಗಳ ಮನವಿ/ಅಗತ್ಯಕ್ಕನುಗುಣವಾಗಿ ತ್ವರಿತವಾಗಿ ಸ್ಪಂದಿಸಿ ನಿಯಮಾನುಸಾರ ಪ್ರಾಯೋಗಿಕ ಪರೀಕ್ಷೆಗಳು ಸುಗಮವಾಗಿ ಹಾಗೂ ಸಮರ್ಪಕವಾಗಿ ಜರುಗಲು ಕ್ರಮವಹಿಸಲು ತಿಳಿಸಲಾಗಿದೆ.

BTELinx User Forum - Telegram Group ನಲ್ಲಿ ಪ್ರಾಯೋಗಿಕ ಪರೀಕ್ಷೆಗಳ/ಪರೀಕ್ಷಕರ ಹಂಚಿಕೆಗಾಗಿ ಸಂದೇಶಗಳನ್ನು ಕಳುಹಿಸಬಾರದೆಂದು ರಾಜ್ಯದ ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಗಳ ಪ್ರಿನ್ಸಿಪಾಲರುಗಳಿಗೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ಈ ವಿಷಯದಲ್ಲಿ ಉಲ್ಲೇಖಿತ ಜ್ಞಾಪನದನ್ವಯ ಪರೀಕ್ಷಕರ ಸಮಿತಿಗಳ ಅಧ್ಯಕ್ಷರುಗಳನ್ನು ಇ-ಮೇಲ್/ಮೊಬೈಲ್ ಮೂಲಕ ಸಂಪರ್ಕಿಸಲು ತಿಳಿಸಲಾಗಿದೆ.

BTELinx User Forum - Telegram Group Admin ಸೂಚಿಸುವ ವಿಷಯಗಳನ್ನು ಮಾತ್ರ ಗ್ರೂಪ್ ನಲ್ಲಿ ಪ್ರಸ್ತಾಪಿಸಲು ಮತ್ತು ಗ್ರೂಪ್ ಶಿಷ್ಟಾಚಾರದಂತೆ ವಿಷಯಾದಾರಿತವಾಗಿ ಸದ್ಬಳಕೆ ಮಾಡಿಕೊಳ್ಳಲು ತಿಳಿಸಲಾಗಿದೆ. ತಪ್ಪಿದಲ್ಲಿ ಮುಂದಿನ ಅನಾನುಕೂಲಗಳಿಗೆ ಸಂಬಂಧಿಸಿದ ಸಂಸ್ಥೆಗಳ ಪ್ರಿನ್ಸಿಪಾಲರೇ ಹೊಣೆಗಾರರಾಗಿರುತ್ತಾರೆಂದು ಸ್ಪಷ್ಟವಾಗಿ ತಿಳಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,

ರಾಜ್ಯದ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್ ಗಳ ಪ್ರಾಂಶುಪಾಲರುಗಳಿಗೆ

- ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ

ಪ್ರತಿ:

1. ಪರೀಕ್ಷಕರ ಸಮಿತಿಗಳ ಅಧ್ಯಕ್ಷರುಗಳು. - ಅಗತ್ಯ ಕ್ರಮಕ್ಕಾಗಿ
2. ಕಂಪ್ಯೂಟರ್ ವಿಭಾಗಕ್ಕೆ - ಬಿಟಿಇ ಲಿಂಕ್ಸ್ ವೆಬ್ ಪೋರ್ಟ್ ಲ್ ನಲ್ಲಿ ಪ್ರಕಟಿಸಲು
3. ಇ-ಗವರ್ನೆನ್ಸ್ ವಿಭಾಗ- ವೆಬ್ ಸೈಟ್ ನಲ್ಲಿ ಪ್ರಕಟಿಸಲು
4. ಮಾನ್ಯ ಆಯುಕ್ತರವರ ಆಪ್ತ ಶಾಖೆ
5. ನಿರ್ದೇಶಕರ ಆಪ್ತ ಶಾಖೆ
6. ಕಾರ್ಯದರ್ಶಿಯವರ ಆಪ್ತ ಶಾಖೆ